ಮಾವು ರಫ್ತು ಮಾಡಲಿಕ್ಕೆ ಆಗುತ್ತದೆ. ನಾವು ನಮ್ಮ ರಾಜ್ಯದಲ್ಲಿ ಅತ್ಯುತ್ತಮ ಮಾವು ಇಟ್ಟುಕೊಂಡು ರಫ್ತು ಮಾಡಲಿಕ್ಕೆ capacity ಇಲ್ಲ. ಬೇರೆಯವರು ಮಾಡುತ್ತೇವೆಂದು ಹೇಳಿದರೆ ಬೇಡವೆಂದು ಹೇಳುವುದು ಏಕೆ? ಶರದ್ ಪವಾರ್‌ರವರು ಈ ವಿಷಯದಲ್ಲಿ ಯಾವ ತಪ್ಪನ್ನೂ ಮಾಡುತ್ತಿಲ್ಲ. ನಮ್ಮ ರಾಜ್ಯದ ಹಿತದೃಷ್ಟಿಯಿಂದಲೇ ಅವರು ಇದನ್ನು ಆದಷ್ಟು ಬೇಗ pass ಮಾಡಿ ಎಂದು ಹೇಳುತ್ತಿದ್ದಾರೆ ಮತ್ತು ಇದಕ್ಕೂ ಸಹ WTO ಗೂ ಸಂಬಂಧ ಇದೆಯೆಂದು ಹೇಳುವುದನ್ನು ನಾವು ಒಪ್ಪುವುದಿಲ್ಲ. WTO ನಿಂದ ನಮ್ಮ ದೇಶಕ್ಕೆ ಕೆಲವೊಂದು ಅನುಕೂಲಗಳಾಗಿವೆ ಕೆಲವು ಅನಾನುಕೂಲಗಳೂ ಆಗಿವೆ. 6 ತಿಂಗಳಿನಿಂದ ಹಾಲಿನ ಉತ್ಪಾದನೆಯಲ್ಲಿ ಮೊದಲನೆಯ ಸ್ಥಾನದಲ್ಲಿದ್ದ ಯುರೋಪ್ ಖಂಡಕ್ಕೆ ನಮ್ಮ ದೇಶದಿಂದ ಹಾಲನ್ನು (skimmed milk) ರಫ್ತು ಮಾಡುವ ಅವಕಾಶವಿದೆ. ಅಂದರೆ, fat ಕಡಿಮೆ ಇರುವ ಹಾಲನ್ನು ರಫ್ತು ಮಾಡುವ ಅವಕಾಶವಿದೆ. ಅದನ್ನು ಬಳಸಿಕೊಳ್ಳುವ capacity ನಮಗೆ ಇಲ್ಲದೇ ನಾವು ಯಾರ್‍ಯಾರನ್ನೋ ಟೀಕೆ ಮಾಡುವುದು ಸರಿಯಲ್ಲ. ಹಾಗಾಗಿ ಇದನ್ನು ಯಾವ committee ಗೂ refer ಮಾಡುವ ಅವಶ್ಯಕತೆಯಿಲ್ಲ. ರೈತರ ಹಿತದೃಷ್ಟಿಯಿರುವ amendment ಇದು. ಸರ್ಕಾರ ತಕ್ಷಣ ಇದನ್ನು pass ಮಾಡಿ ಕಾರ್ಯಗತಗೊಳಿಸಬೇಕು, Ordinance ತರುವುದಕ್ಕೂ ನಾವು ಒಪ್ಪುವುದಿಲ್ಲ. ಏಕೆಂದರೆ, ಇಂಥ ಒಂದು ಸದನ ಸಭೆ ಸೇರಿರುವ ಸಂದರ್ಭದಲ್ಲಿ ರೈತರ ಹಿತಾಸಕ್ತಿಯನ್ನು ಕಾಪಾಡುವ Bill ಅನ್ನು Ordinance ಮೂಲಕ ತರುತ್ತೀರೆಂದರೆ ನಾಚಿಕೆಗೇಡಾಗುತ್ತದೆ. ನಾವೆಲ್ಲರೂ ಸೇರಿ pass ಮಾಡೋಣ. ರೈತರ ಪರವಾಗಿ ನಾವಿದ್ದೇವೆ ಎನ್ನುವ ಸಂದೇಶವನ್ನು ನಾವೆಲ್ಲರೂ ಸೇರಿ ಕಳುಹಿಸೋಣ ಎಂದು ತಮ್ಮಲ್ಲಿ ಮನವಿ ಮಾಡಿ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :– ನಾನು ಮಾತನಾಡಬೇಕಾಗಿದೆ.

6. ಪ್ರಕಟಣೆ :–

ಉಪಾಧ್ಯಕ್ಷರು :– ಈಗ ಒಂದು ಪ್ರಕಟಣೆ ಇದೆ.

ಮಾನ್ಯ ಸಚಿವರು ಹಾಗೂ ಶಾಸಕರುಗಳಿಗೆ ದಿನಾಂಕ 17–07–2007 ರಿಂದ 19–07–2007 ರವರೆಗೆ ಹಾಗೂ 24–07–2007 ರಿಂದ 26–07–2007 ರವರೆಗೆ ಎರಡು ತಂಡಗಳಲ್ಲಿ ಸೂಕ್ಷ್ಮ ವ್ಯಾಯಾಮ ತರಬೇತಿ ಶಿಬಿರವನ್ನು ಶ್ರೀ ಸ್ವಾಮಿ ಯೋಗಾನಂದ ಯೋಗಾಚಾರ್ಯ ಇವರಿಂದ ವಿಧಾನ ಸಭೆಯ ಶಾಸಕರ

ಭವನದ ಸಮ್ಮೇಳನ ಸಭಾಂಗಣದಲ್ಲಿ ಬೆಳಿಗ್ಗೆ 8.00 ರಿಂದ 9.30 ಗಂಟೆಯವರೆಗೆ ಆಯೋಜಿಸಲಾಗಿದ್ದು ಇದೇ ಶಿಬಿರದಲ್ಲಿ ಆಯುರ್ವೇದಿಕ್ ವೈದ್ಯಾಧಿಕಾರಿಗಳಿಂದ ನಾಡಿ ಪರೀಕ್ಷೆಯನ್ನು ಸಹ ಏರ್ಪಡಿಸಲಾಗಿದೆಯೆಂದು ಇದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಮಾನ್ಯ ಸದಸ್ಯರುಗಳಿಗೆ ದಿನಾಂಕ 16 ನೇ ಜುಲೈ, 2007 ರ ಲಘು ಪ್ರಕಟಣೆಯಲ್ಲಿ ತಿಳಿಸಲಾಗಿರುತ್ತದೆ.

ಯೋಗಾನಂದ ಯೋಗಾಚಾರ್ಯ ಇವರು 98 ವರ್ಷ ವಯಸ್ಸಿನರಾಗಿದ್ದು ಸೂಕ್ಷ್ಮ ವ್ಯಾಯಾಮದಲ್ಲಿ ಅಪಾರ ಅನುಭವವುಳ್ಳವರಾಗಿದ್ದು ಈ ತರಬೇತಿ ಶಿಬಿರದಲ್ಲಿ ತಾವುಗಳೆಲ್ಲರೂ ಭಾಗವಹಿಸಿ ಇದನ್ನು ಉಪಯೋಗ ಪಡಿಸಿಕೊಳ್ಳಬೇಕೆಂದು ಮತ್ತೊಮ್ಮೆ ತಮ್ಮೆಲ್ಲರನ್ನು ಕೋರುತ್ತಿದ್ದೇನೆ.

ಉಪಾಧ್ಯಕ್ಷರು :– ಊಟದ ನಂತರ ಮುಂದುವರಿಸೋಣ. ಈಗ ಸದನವನ್ನು ಪುನಃ 3–30 ಕ್ಕೆ ಸೇರುವಂತೆ ಮುಂದೂಡಲಾಗುವುದು.

(ಸದನವು 2 ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸೇರುವಂತೆ ನಿಶ್ಚಯಿಸಲಾಯಿತು)

(ಸಭೆಯು 3 ಗಂಟೆ 52 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

7. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರ</u> :–

ವಿಷಯ :– <u>ವಿಧಾನಸೌಧದ 2 ನೇ ಮಹಡಿಗೆ ಬೆಂಕಿ ಬಿದ್ದಿರುವ ಬಗ್ಗೆ</u> :–

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಅಧ್ಯಕ್ಷರೆ, ವಿಧಾನಸೌಧದ 2 ನೇ ಮಹಡಿಗೆ ಭಾರಿ ಬೆಂಕಿಬಿದ್ದಿದೆ. ತಾವು ಅಲ್ಲಿಗೆ ಹೋಗಿ ನೋಡಬೇಕು. ವಿಧಾನಸೌಧ 2 ನೇ ಮಹಡಿಗೆ ತಾವು ಹೋಗಿ ಬಂದರೆ ಚೆನ್ನಾಗಿರುತ್ತದೆ. ಭಾರಿ ಭಯಂಕರವಾದಂತಹ ಬೆಂಕಿಬಿದ್ದಿದೆ. ಅದರಲ್ಲಿ ಅನೇಕ ಕಡತಗಳು ಸುಟ್ಟುಹೋಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ವಿಧಾನಸೌಧಕ್ಕೆ ಬೆಂಕಿ ಬಿದ್ದಿದೆ, ಇದನ್ನು ಆರಿಸಬೇಕಾದರೆ, ಹೊರಗಡೆಯಿಂದ ನೀರು ತರಬೇಕಾಯಿತು. ಇಲ್ಲಿ ಬೆಂಕಿಯನ್ನು ಆರಿಸುವುದಕ್ಕೆ ಯಾವ ವ್ಯವಸ್ಥೆಗಳು ಇಲ್ಲ. ಏನು ನಾವೆಲ್ಲರೂ ಒಳಗಡೆ ಕುಳಿತುಕೊಂಡು ಚರ್ಚೆ ಮಾಡುತ್ತಿದ್ದೇವೆ. ಈ ಕಡೆ ದಾಳಿಯು ಬರಲಿಲ್ಲ,